ಹುಣಿಸೆ, ದೇವದಾರ, ಬಂಡೆ ಇರುವುದನ್ನು ನಾನು ಕಣ್ಣಾರೆ ನೋಡಿದ್ದೇನೆ. ಇದು ಡಿ.ಪಿ.ಎ.ಪಿ. ಏರಿಯಾ ಮತ್ತು ಡ್ರಾಟ್ ಏರಿಯಾ ಆಗಿರುವುದರಿಂದ ಈ ಜಾಗದಲ್ಲಿ ಆದಷ್ಟು ಜಾಗ್ರತೆ ಅಫಾರ್ ಸ್ಟೇಷನ್ ಮಾಡುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಸಿ. ಎನ್. ಪಾಟೀಲ್.—ಅದು ನನ್ನ ಗಮನಕ್ಕೆ ಬಂದಿಲ್ಲ. ಅದನ್ನು ಉತ್ತರದಲ್ಲೇ ಕೊಟ್ಟಿದ್ದೇನೆ. ಅದು ಡಿ.ಪಿ.ಎ.ಪಿ, ಇರಾಖೆಯಲ್ಲೇ ಇದೆ. ಅವರಿಂದ ನಮಗೆ ದೊರಕಿದರೆ ಆವಾಗ ಅಲ್ಲಿ ಅಫಾರ್‌ಸ್ಟೇಷನ್ ಮಾಡುವುದಕ್ಕೆ ತಕ್ಕ ಕಾರ್ಯಕ್ರಮ ಕೈಗೊಳ್ಳಬಹುದು.

ಬಾಗೇವಾಡಿ ಹಾಗೂ ಹಚ್ಚೊಳ್ಳಿ ಗ್ರಾಮಗಳಲ್ಲಿರುವ ಆರೋಗ್ಯ ಉಪ-ಕೇಂದ್ರಗಳು

239. ಶ್ರೀ ಬಿ. ಇ. ರಾಮಯ್ಯ, (ಶಿರಗುಪ್ಪ).—ಆರೋಗ್ಯ ಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೇ :—

(ಅ) ಬಾಗೇವಾಡಿ ಮತ್ತು ಹಚ್ಚೊಳ್ಳಿ ಗ್ರಾಮದಲ್ಲಿ ಹೆಲ್ತ್‌ಸಬ್-ಸೆಂಟರ ಮುಂದೆ ಮುಂಜೂರು ಮಾಡುವಾಗ ಕೊಡುವಾಗುವುದೆಂದು ಭರವಸೆಯನ್ನು ನೀಡಿದ್ದ ವಿಷಯ ಮಾನ್ಯ ಮಂತ್ರಿಗಳ ಗಮನದಲ್ಲಿದೆಯೇ ?

(ಆ) 20 ವರ್ಷಗಳಿಂದ ನಮ್ಮ ತಾಲ್ಲೂಕಿಗೆ ಹೊಸ ಸಬ್-ಸೆಂಟರ ಕೊಟ್ಟಿಲ್ಲ ಅದಕ್ಕೆ ಕಾರಣಗಳೇನು ?

(ಇ) ಹೊಸದಾಗಿ ಸ್ಥಾಪಿಸಲಾಗುವ 100 ಸಬ್ ಸೆಂಟರುಗಳಲ್ಲಿ ಮೇಲೆ ಕಾಣಿಸಿದ 2 ಗ್ರಾಮಗಳನ್ನು ಸೇರಿಸಲಾಗಿದೆಯೇ ?

ಶ್ರೀ ಎಚ್. ಸಿದ್ದವೀರಪ್ಪ(ಆರೋಗ್ಯ ಶಾಖೆಯ ಮಂತ್ರಿಗಳು).—

(ಅ) ಹೌದು.

(ಆ) ಕರ್ನಾಟಕ ಪ್ರಾಂತ್ಯದಲ್ಲಿ ಇನ್ನೂ ಹಿಂದುಳಿದ ಬಾಲ ಕ್ಷೇತ್ರಗಳಲ್ಲಿ ಆಸ್ಪತ್ರೆಗಳನ್ನು ಸ್ಥಾಪಿಸಬೇಕಾದ ಅವಶ್ಯಕತೆ ಇದ್ದುದರಿಂದ ಈ ಮೇಲ್ಕಂಡ ಗ್ರಾಮಗಳಿಗೆ ಆಸ್ಪತ್ರೆಗಳನ್ನು ಮುಂಜೂರು ಮಾಡಲು ಸಾಧ್ಯವಾಗಲಿಲ್ಲ.

(ಇ) ಹೊಸದಾಗಿ ಸ್ಥಾಪಿಸಲಾಗುವ 100 ಸಬ್-ಸೆಂಟರಗಳಲ್ಲಿ ಒಂದನ್ನು ಬಾಗೇವಾಡಿ ಗ್ರಾಮಕ್ಕೆ ಮುಂಜೂರು ಮಾಡಲಾಗಿದೆ. ಹಚ್ಚೊಳ್ಳಿ ಗ್ರಾಮದ ಬಗ್ಗೆ ಶೀಘ್ರದಲ್ಲಿಯೇ ತೀರ್ಮಾನವನ್ನು ತೆಗೆದುಕೊಳ್ಳಲಾಗುವುದು.

ಶ್ರೀ ಬಿ.ಇ. ರಾಮಯ್ಯ.— (ಅ) ಪ್ರಶ್ನೆಗೆ ಉತ್ತರವಾಗಿ ಹೌದು ಅಂತ ಹೇಳಿದ್ದೀರಿ. ಈಗ ಇನ್ನು 57 ಸಬ್ ಸೆಂಟರ್ಸ್ ಕೊಡಬೇಕು ಅಂತ ಏನು ಇದೆ ಅದರಲ್ಲಿ ಇದನ್ನು ಸೇರಿಸಿ ಕೊಳ್ಳುತ್ತೀರಾ ?

† ಶ್ರೀ ಹೆಚ್. ಸಿದ್ದವೀರಪ್ಪ.—ಅದನ್ನು ವಿಚಾರಣೆ ಮಾಡಬೇಕಾಗುತ್ತದೆ. 57 ಸಬ್ ಸೆಂಟರ್ಸ್‌ಗಳನ್ನು ಕೊಡುವುದಕ್ಕೆ 500 ಅರ್ಜಿಗಳು ಬಂದಿರುತ್ತವೆ. ಒಂದೊಂದು ತಾಲ್ಲೂಕಿಗೆ ಒಂದೊಂದು ಕೊಡಬೇಕಾಗುತ್ತದೆ. ಆದರಲ್ಲಿ ಕೆಲವಕ್ಕೆ ಪ್ರಿಯಾರಿಟಿ ಕೊಡಬೇಕಾಗುತ್ತದೆ.

ಶ್ರೀ ಬಿ.ಇ. ರಾಮಯ್ಯ.—ಇದು ಹೋಬಳಿ ಹೆಡ್‌ಕ್ವಾರ್ಟರ್ಸ್, ಇಲ್ಲಿಗೆ ಸಾರಿಗೆ ಸೌಕರ್ಯ ಇಲ್ಲ. ಅಲ್ಲದೆ ಇಲ್ಲಿಗೆ ಕೊಟ್ಟರೆ 20-30 ಗ್ರಾಮಾಂತರ ಪ್ರದೇಶದ ಜನರಿಗೆ ಅನುಕೂಲವಾಗುತ್ತದೆ ಇಲ್ಲಿಗೆ ಒಂದು ಸಬ್‌ಸೆಂಟರ್‌ನ್ನು ಆದಷ್ಟು ಜಾಗ್ರತೆ ಕೊಡುತ್ತೀರಾ ?

ಶ್ರೀ ಹೆಚ್. ಸಿದ್ದವೀರಪ್ಪ —ಎರ್ಲಾ ಕಡೆಯೂ ಆತುರ ಇದೆ. ಎಲ್ಲರಿಗೂ ಮೆಡಿಕರ್ ಫೆಸಿಲಿಟೀಸ್ ಬೇಕು ಅನ್ನತಕಂಥಾ ಆತುರ ಇದೆ. ನಾವು ಅದನ್ನು ಈಕ್ವಿಟಬಲ್ ಆಗಿ ಸರಿಯಾಗಿ ಎಲ್ಲಾ ಕಡೆಯೂ ಡಿಸ್ಟ್ರಿಬ್ಯೂಟ್ ಮಾಡಬೇಕಾಗುತ್ತದೆ. ಒಂದೊಂದು ತಾಲ್ಲೂಕಿಗೆ ಒಂದೊಂದು ಕೊಡ ಬೇಕಾದರೆ ಕೆಲವು ತಾಲ್ಲೂಕಿನವರು ಇನ್ನೂ ಸ್ವಲ್ಪ ದಿವಸ ಕಾಯಬೇಕಾಗುತ್ತದೆ. ಮುಂದೆ ಅವಕಾಶ ಸಿಕ್ಕಿದಾಗ ನಿಮ್ಮ ಗ್ರಾಮಕ್ಕೂ ಕೊಡುವುದಕ್ಕೆ ಯೋಚನೆ ಮಾಡೋಣ.

ಶ್ರೀ ಟಿ.ಎಂ. ಮಂಜುನಾಥ್.— ಸ್ಪೀಮ್ಸ್, ಸರ್ಕಾರ ಈ ನಬ್ ಸೆಂಟರ್ಸ್ ಏನು ಕೊಡುತ್ತಾರೋ ಇದಕ್ಕೆ ಏನಾದರೂ ಒಂದು ನೀತಿ ನಿಯಮಾವಳಿಗಳು ಇವೆಯೇ ? ಹಾಗಿದ್ದಪಕ್ಷದಲ್ಲಿ ಆ ನೀತಿ ನಿಯಮಾವಳಿಗಳು ಯಾವುವು ? ಅಥವಾ ದೊಡ್ಡ ಮನುಷ್ಯರು ಹೇಳುತ್ತಾರೆ ಅಂತ ಈ ನಬ್ ಸೆಂಟರ್ಸ್ ಕೊಡುತ್ತಾರೋ ಅಥವಾ ಜನಗಳ ಒಂದು ಸೌಲಭ್ಯಕ್ಕೆ ತಕ್ಕಂತ ಆ ಒಂದು ನಬ್‌ಸೆಂಟರ್ಸ್‌ನ್ನು ಕೊಡಬೇಕು ಅನ್ನುವ ದೃಷ್ಟಿಯಿಂದ ಇದನ್ನು ಕೊಡುತ್ತಾರೇ ?

ಶ್ರೀ ಹೆಚ್. ಸಿದ್ದವೀರಪ್ಪ.—ಅದಕ್ಕೆ ಸರ್ಕಾರೀ ಹುಕುಂ ಇದೆ. ಇಲ್ಲಿ ಈ ಒಂದು ಆಸ್ಪತ್ರೆ ಬೇಕು ಅಲ್ಲಿ ಜನಗಳು ಮುಂದೆ ಬಂದು ಕಟ್ಟಡ ಕಟ್ಟಿಕೊಡಬೇಕು ಮತ್ತು ಡಾಕ್ಟರ್ಸ್‌ಗೆ ವಸತಿ ಕಟ್ಟಿಕೊಡಬೇಕು ಮತ್ತು ಅದಕ್ಕೆ ಬೇಕಾದ ಇತರ ಅನುಕೂಲತೆಗಳನ್ನು ಅವರು ಮಾಡಿಕೊಡಬೇಕು. 15 ಸಾವಿರ ಜನಸಂಖ್ಯೆ ಎಲ್ಲಿ ಇದೆಯೋ ಅಲ್ಲಿ ಈ ಒಂದು ಮೆಡಿಕರ್ ಫೆಸಿಲಿಟೀಸ್ ಇರದಿದ್ದರೆ ಅದಕ್ಕೆ ಮೊದಲು ಪ್ರಿಯಾರಿಟಿ ಕೊಡುತ್ತೇವೆ ನಮಗೆ ಬೇಕಾದ್ದು ಏನೆಂದರೆ ಸಾರ್ವಜನಿಕರ ಸಹಕಾರ ಮತ್ತು ಜನಗಳ ಒಂದು ಹುಮ್ಮಸ್ಸು ಅದು ಎಲ್ಲಿ ಇರುತ್ತದೆಯೋ ಅಂಥಾ ಕಡೆ ಕೊಡುತ್ತೇವೆ.

ಶ್ರೀ ಎಸ್. ಬಂಗಾರಪ್ಪ.—ತಾವು ಈ ಒಂದು ಮೆಡಿಕರ್ ಸೆಂಟರ್ಸ್ ಕೊಡಬೇಕಾದರೆ ಏನೇನು ಅನುಕೂಲತೆಗಳು ಬೇಕು ಅಂತ ಹೇಳಿದಿರಿ ಅನುಕೂಲತೆಗಳನ್ನು ನಾವು ಎರಡು ಜಾಗದಲ್ಲಿ ಮಾಡಿಕೊಡುತ್ತೇವೆ. ತಾವು ಆ ಜಾಗಕ್ಕೆ ಕೂಡಲೇ ಈ ಆಸ್ಪತ್ರೆಯನ್ನು ಮಂಜೂರು ಮಾಡಿ ಕೊಡುತ್ತೀರಾ ?

ಶ್ರೀ ಹೆಚ್. ಸಿದ್ದವೀರಪ್ಪ.—ನೀವು ಆ ಎರಡು ಜಾಗದಲ್ಲೂ ಅನುಕೂಲತೆಗಳನ್ನು ಮಾಡಿ ಕೊಡಿ. ಅನಂತರ ವೇಕೇನ್ಸಿ ಇದ್ದರೆ 5ನೇ ಪಾಂಚವಾರ್ಷಿಕ ಯೋಜನೆಯಲ್ಲಿ 260 ಆಸ್ಪತ್ರೆಗಳನ್ನು ನಮ್ಮ ರಾಜ್ಯಕ್ಕೆ ಕೊಟ್ಟಿದ್ದಾರೆ, ಈಗಾಗಲೇ 147 ಆಸ್ಪತ್ರೆಗಳು ಡಿಸ್ಟ್ರಿಬ್ಯೂಟ್ ಆಗಿದೆ. ಇನ್ನು ಉಳಿದ 53 ಆಸ್ಪತ್ರೆಗಳು ಏನು ಇವೆ ಅದರಲ್ಲಿ ಮೊದಲು ಎಲ್ಲೆಲ್ಲಿ ಹೆಚ್ಚು ಇದರ ಅವಶ್ಯಕತೆ ಇದೆ ಎಲ್ಲಿ ಜನಗಳ ಒಂದು ಸಹಕಾರ ಮತ್ತು ಹುಮ್ಮಸ್ಸು ಇದೆ ಅಲ್ಲಿ ಮೊದಲು ಮಾಡೋಣ. ಈಗ ನಮಗೂ ನಿಮಗೂ ಬೇಕಾಗಿಲ್ಲ. ಏಕೆಂದರೆ ನಿಮಗೆ ಹೇಗಾದರೂ ಇರ್ರಿಗೇಷನ್ ಪ್ರಾಜೆಕ್ಟ್ ಇದೆ ಸುಖವಾಗಿದ್ದೀರಿ. ಅದುದರಿಂದ ಈವಾಗ ನಮಗೂ ನಿಮಗೂ ಬೇಕಾಗಿಲ್ಲ.

ಶ್ರೀ ಬಿ.ಇ. ರಾಮಯ್ಯ.—ಅಲ್ಲಿ ಈಗ ಸಾರಿಗೆ ಸೌಕರ್ಯವಿಲ್ಲ, ಮತ್ತು ಆ ಭಾಗ ಬಹಳ ಹಿಂದುಳಿದಿದೆ ; ಮತ್ತು ಅಲ್ಲಿಯ ಜನರೂ ಸಹ ಈ ಕೇಂದ್ರ ಬೇಕೆಂದು ಬಹಳ ಕಾಲದಿಂದ ಕೇಳುತ್ತಿದ್ದಾರೆ ; ಮತ್ತು ಅದಕ್ಕಾಗಿ 4 ಎಕರೆ ಜಮೀನನ್ನು ಕೊಡುವುದಾಗಿ ತಿಳಿಸಿದ್ದಾರೆ ; ಆದಕಾರಣ ಆದಷ್ಟು ಜಾಗ್ರತೆ ಅಲ್ಲಿ ಒಂದು ಉಪಕೇಂದ್ರವನ್ನು ತೆರೆಯುತ್ತೀರಾ ?

ಶ್ರೀ ಎಚ್. ಸಿದ್ದವೀರಪ್ಪ.—ನೂರಾರು ಜನರು ಇದೇರೀತಿ ತಮಗೆ ಮಂಜೂರು ಮಾಡಿಕೊಡಿ ಎಂದು ಬಂದು ಕೇಳುತ್ತಿದ್ದಾರೆ ; ಈಗ ಹಜ್ಜೇಳ್ಳಿ ಗ್ರಾಮದ ಜನರು ರಬಿಹಾಳು ಕೇಂದ್ರದಿಂದ ವೈದ್ಯಕೀಯ ಸೌಲಭ್ಯವನ್ನು ಪಡೆಯುತ್ತಿದ್ದಾರೆ. ಆದಕಾರಣ ಈಗ ಎಲ್ಲಿ ಇವುಗಳ ಅವಶ್ಯಕತೆ ಬಹಳವಾಗಿದೆಯೋ ಅಲ್ಲಗೆ ಮೊದಲು ಕೊಟ್ಟು ಆಮೇಲೆ ಬಾಕಿಯವರಿಗೆ ಕೊಡಬೇಕಾಗುತ್ತದೆ.

ಶ್ರೀ ಬಿ.ಇ. ರಾಮಯ್ಯ —ಈಗ ಹಜ್ಜೇಳ್ಳಿಗೂ ಮತ್ತು ರಬಿಹಾಳಿಗೂ 13 ಮೈಲಿ ಆಗುತ್ತದೆ ; ಮತ್ತು ಅಲ್ಲಿಗೆ ಒಂದು ಬಸ್ ಹೋಗುವುದಕ್ಕೂ ಸಾಧ್ಯವಿಲ್ಲ ; ಆದಕಾರಣ ಅಲ್ಲಿಯಾ ಒಂದು ಉಪಕೇಂದ್ರ ಸ್ಥಾಪನೆ ಮಾಡುತ್ತೀರಾ ?

ಶ್ರೀ ಎಚ್. ಸಿದ್ದವೀರಪ್ಪ. — ನಿಮ್ಮ ಒಂದು ಆತುರತೆ ನನ್ನ ಗಮನಕ್ಕೆ ಬಂದಿದೆ. ಆದನ್ನು ಬೇಗ ಅಲ್ಲಿಯು ಒಂದು ಉಪಕೇಂದ್ರ ತೆರೆಯಲು ಪ್ರಯತ್ನ ಮಾಡೋಣ.